ಚಿಣ್ಣರಲೋಕ

## ಪಂಚತಂತ್ರ ಕಥೆ


### ಮುಂಗುಸಿಯ ಮರಣ

ದೇವಶರ್ಮ ಎಂಬುವನ ಹೆಂಡತಿಗೆ ಒಂದು ಮಗು ಆಯಿತು. ಆ ಮಗು ಹುಟ್ಟಿದಾಗಲೇ ಮನೆಯಲ್ಲಿದ್ದ ಮುಂಗುಸಿಗೂ ಮಗು ಆಯಿತು. ತಾಯಿ ಮುಂಗುಸಿ ತೀರಿಕೊಂಡಿತು. ಮನೆಯೊಡತಿ ತನ್ನ ಮಗುವಿನ ಜೊತೆ ಅದನ್ನೂ ಸಾಕಿದಳು. ಆದರೆ ಅವಳಿಗೆ ಮರಿ ಮುಂಗಸಿಯ ಮೇಲೆ ಒಂದು ರೀತಿಯ ಸಂಶಯ ಇತ್ತು.

ಒಡತಿ ಒಮ್ಮೆ ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ, ನೀರು ತರಲು ಹೋದಳು. ಮನೆಯಲ್ಲಿ ಯಾರೂ ಇರಲಿಲ್ಲ. ಆಗ ಒಂದು ಹಾವು ಮನೆಯೊಳಗೆ ಬಂತು. ಹಾವಿಗೂ ಮುಂಗುಸಿಗೂ ಘೋರ ಯುದ್ಧವಾಯಿತು. ಮುಂಗುಸಿ ಹಾವನ್ನು ಕೊಂದಿತು.

ಒಡತಿ ಸ್ವಲ್ಪ ಹೊತ್ತಿನ ನಂತರ ವಾಪಸು ಬಂದಳು. ಮನೆಬಾಗಿಲಿನಿಂದ ಹೊರಬರುತ್ತಿದ್ದ ಮುಂಗುಸಿಯನ್ನು ಕಂಡಳು. ಅದರ ಬಾಯಿಯೆಲ್ಲ ರಕ್ತ. ಅದರ ಮೈಯಲ್ಲಿ ಕೂಡ ರಕ್ತ ಮೆತ್ತಿಕೊಂಡಿತ್ತು.

ಈ ಹಾಳು ಮುಂಗುಸಿ ತನ್ನ ಮಗುವನ್ನು ಕೊಂದಿದೆ ಎಂದು ಅವಳು ಭಾವಿಸಿದಳು. ಕೋಪ ಮತ್ತು ದುಃಖದಿಂದ ಅದರ ತಲೆಗೆ ನೀರಿನ ಕೊಡವನ್ನೇ ಕುಕ್ಕಿದಳು. ಮರಿ ಮುಂಗುಸಿ ನುಜ್ಜುಗುಜ್ಜಾಯಿತು.




ಸರಸರನೆ ಮನೆಯೊಳಗೋಡಿದ ಒಡತಿ ಅಲ್ಲಿ ಕಂಡುದೇನು? ಮಗು ತೊಟ್ಟಿಲಲ್ಲಿ ನಗುನಗುತ್ತ ಆಟವಾಡುತ್ತಿತ್ತು. ಅದರ ಮುಗ್ಗುಲಲ್ಲೇ ಹಾವೊಂದು ಸತ್ತುಬಿದ್ದಿತ್ತು. ಸುತ್ತಲೂ ರಕ್ತದ ಓಕುಳಿ ಹರಿದಿತ್ತು.

ಒಡತಿ ಕೈಹೊತ್ತು ಕುಳಿತಳು. "ಕಂದನನ್ನು ರಕ್ಷಿಸಿದ ಮುಂಗುಸಿಯನ್ನು ಕೊಂದೆನಲ್ಲಾ, ತಪ್ಪುಮಾಡಿದೆ" ಎಂದು ಹಲುಬಿದಳು, ತನ್ನನ್ನೇ ಶಪಿಸಿಕೊಂಡಳು. ಆದರೆ ಸತ್ತುಹೋದ ಮುಂಗುಸಿ ಮತ್ತೆ ಬರುವುದೇ? ಮನೆಯೊಡೆಯ ಮನೆಗೆ ಬಂದನು. ಪ್ರೀತಿಯ ಮುಂಗುಸಿಯ ಸಾವಿಗಾಗಿ ಪರಿತಾಪಪಟ್ಟನು. ದುಡುಕು ಬುದ್ಧಿಯ ಮಡದಿಯನ್ನು ಚೆನ್ನಾಗಿ ಹಳಿದನು.

ನೀತಿ: **'ಅಪರೀಕ್ಷ್ಯ ನ ಕರ್ತವ್ಯಂ ಕರ್ತವ್ಯಂ ಸುಪರೀಕ್ಷಿತಂ' –** ಪರೀಕ್ಷಿಸಿ ವಿಚಾರ ಮಾಡದೆ, ಏನನ್ನೂ ಮಾಡಬಾರದು. ಎಲ್ಲ ಕಾರ್ಯವನ್ನೂ ಚೆನ್ನಾಗಿ ಪರೀಕ್ಷಿಸಿ ಮಾಡಬೇಕು.

## ಸಂಸ್ಕೃತಿ ಪರಿಚಯ

### ಭಾರತೀಯ ಸಂಸ್ಕೃತಿಯ ಲಕ್ಷಣಗಳು-೨

ಭಾರತೀಯ ಸಂಸ್ಕೃತಿಯ ನಾಲ್ಕು ಲಕ್ಷಣಗಳನ್ನು ಹಿಂದಿನ ತಿಂಗಳು ತಿಳಿದುಕೊಂಡೆವು. ೫. ಐದನೆಯ ಲಕ್ಷಣವೆಂದರೆ **ಇಡೀ ಜಗತ್ತು ಭಗವಂತನಿಂದ ಹುಟ್ಟಿದೆ, ಭಗವಂತನೇ ಈ ಜಗತ್ತನ್ನು ವ್ಯಾಪಿಸಿದ್ದಾನೆ ಮತ್ತು ಕಡೆಗೆ ಇಡೀ ಪ್ರಪಂಚವು ಭಗವಂತನಲ್ಲೇ ಲೀನವಾಗುತ್ತದೆ** ಎನ್ನುವ ದೃಷ್ಟಿ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ನೀವು ಯಾವುದನ್ನು ಪ್ರಪಂಚವೆಂದು ನೋಡುತ್ತೀರೋ ಅದನ್ನು ನಾನು ದೇವರೆಂದು ನೋಡುತ್ತೇನೆ." ಇದನ್ನು **ಅಖಂಡದೃಷ್ಟಿ** ಎನ್ನುತ್ತಾರೆ. ಜಗತ್ತಿನ ಜನರಲ್ಲಿ ಭೇದಗಳು ಇದ್ದರೂ ಅವರೆಲ್ಲರೂ ಭಗವಂತನ ಮಕ್ಕಳು, ಅವರೆಲ್ಲರಲ್ಲೂ ಭಗವಂತನೇ ಇದ್ದಾನೆ ಎನ್ನುವ ಉದಾರ ದೃಷ್ಟಿ ಅದು. ಇನ್ನೊಂದು ಸ್ವಾರಸ್ಯವೆಂದರೆ, ಇಡೀ ಜಗತ್ತೇ ಆಗಿರುವ ಆ ಭಗವತ್ ಶಕ್ತಿಯೇ ನಮ್ಮೊಳಗೂ ಇದೆ. ಹೀಗಾಗಿ, ನಾವು ಕೇವಲ ಅಲ್ಪಶಕ್ತಿಯ, ಅಲ್ಪಜ್ಞಾನದ ಮಾನವರಲ್ಲ. ನಾವೆಲ್ಲರೂ ಒಂದೇ ಭಗವತ್ ಶಕ್ತಿಯ ಅಂಶಗಳು. ಇದು ಭಾರತೀಯರ ಸಿದ್ಧಾಂತ. ೬. **ಕರ್ಮಸಿದ್ಧಾಂತ** ಭಾರತೀಯ ಪರಂಪರೆಯ ಇನ್ನೊಂದು ವೈಶಿಷ್ಟ್ಯ. ಬೇರೆ ಯಾರೂ ನಮ್ಮ ಕಷ್ಟಸುಖಗಳಿಗೆ ಹೊಣೆಗಾರರಲ್ಲ, ನಾವೇ ಹೊಣೆಗಾರರು. ನಾವು ಬಿತ್ತಿದ್ದನ್ನು ಬೆಳೆದುಕೊಳ್ಳುತ್ತೇವೆ. ಆದ್ದರಿಂದ ಒಳ್ಳೆಯ ಕೆಲಸಗಳನ್ನು ಮಾಡಬೇಕು. ಅದರಿಂದ ಮುಂದೆ ಒಳ್ಳೆಯ ಫಲಗಳು ಸಿಗುತ್ತವೆ. –ಇದು ಕರ್ಮ ಸಿದ್ಧಾಂತದಿಂದ ಕಲಿಯುವ ಪಾಠ. ಇದರಿಂದ **ಜನ್ಮಾಂತರದ ಕಲ್ಪನೆಯೂ** ಹುಟ್ಟುತ್ತದೆ. ಈ ಜನ್ಮದಲ್ಲಿ ಅನುಭವಿಸಲಾಗದ್ದು ಮುಂದಿನ ಜನ್ಮಕ್ಕೆ ಮುಂದುವರಿಯುತ್ತದೆ. ದೇಹಕ್ಕೆ ಮಾತ್ರ ಸಾವು, ಆತ್ಮಕ್ಕಲ್ಲ. ೭. ಭಾರತೀಯ ಚಿಂತನೆಗಳು ಬರೀ ವಿಚಾರವಲ್ಲ. ನಮ್ಮ ಋಷಿಮುನಿಗಳು ಆಳವಾಗಿ ಧ್ಯಾನಮಾಡಿ ಕಂಡುಕೊಂಡ **ದರ್ಶನ, ಅನುಭವ.** ತಾವು ಕಂಡುಕೊಂಡ ಸತ್ಯದ ಆಧಾರದ ಮೇಲೆ ಅವರು ತಮ್ಮ ಜೀವನವನ್ನು ನಡೆಸಿ, ನಮಗೆಲ್ಲ ಆದರ್ಶವನ್ನು ಹಾಕಿಕೊಟ್ಟಿದ್ದಾರೆ. ಅದರಂತೆ ನಡೆದರೆ ನಮಗೆ ಶ್ರೇಯಸ್ಸು. ತತ್ತ್ವ ಇರುವುದು ಕೇವಲ ವಾದಕ್ಕಲ್ಲ; ಉತ್ತಮ ಜೀವನ ನಡೆಸಲು ಸಹಾಯಮಾಡುವುದೇ ನಿಜವಾದ ತತ್ತ್ವ. ಇದು ಭಾರತೀಯರ ಅಭಿಪ್ರಾಯ.

**(ಮುಂದಿನ ತಿಂಗಳು:** ಭಾರತೀಯ ಸಂಸ್ಕೃತಿಯ ಇತಿಹಾಸ)

ನರೇಂದ್ರನಿಂದ ಕಲಿಯಬೇಕಾದ ಪಾಠಗಳು

## ಬುದ್ಧಿಚಾತುರ್ಯ

ಕೊಲ್ಕತಾ ಬಂದರಿನಲ್ಲಿ ಇಂಗ್ಲೆಂಡಿನಿಂದ ಒಂದು ಹಡಗು ಬಂದು ನಿಂತಿತ್ತು. ಅದನ್ನು ನೋಡಲು ಅನುಮತಿ ಪತ್ರ ಬೇಕು. ಅದನ್ನು ನೋಡಲು ನರೇಂದ್ರ ಮತ್ತು ಅವನ ಸ್ನೇಹಿತರಿಗೆ ಆಸೆ. ಸರಿ, ಅನುಮತಿ ಪತ್ರವನ್ನು ಪಡೆಯಲು ಅವರು ಆಫೀಸಿಗೆ ಹೋದರು. ಬಾಗಿಲಲ್ಲಿ ನಿಂತಿದ್ದ ದ್ವಾರಪಾಲಕ, "ಏಯ್, ಚೋಟುದ್ದ ಇದ್ದೀಯಾ, ನಿನಗ್ಯಾರೋ ಕೊಡ್ತಾರೆ ಅನುಮತಿಯನ್ನು? ನಡಿ ನಡಿ ಇಲ್ಲಿಂದ" ಎಂದು ಗದರಿಸಿ ಅಟ್ಟಿಬಿಟ್ಟ.

ನರೇಂದ್ರನಿಗೆ ದುಃಖವಾಯಿತು. ಆದರೂ ಎದೆಗುಂದಲಿಲ್ಲ. ಆ ಕಟ್ಟಡವನ್ನೊಮ್ಮೆ ಪೂರ್ತಿ ಸುತ್ತುಹಾಕಿ ನೋಡಿದ. ಹಿಂಭಾಗದಲ್ಲಿ ಒಂದು ಮೆಟ್ಟಲು ಕಾಣಿಸಿಕೊಂಡಿತು. ಧೈರ್ಯಮಾಡಿ, ಮೆಟ್ಟಲು ಹತ್ತಿ ಹೋದ. ಪರದೆ ಸರಿಸಿ ನೋಡುತ್ತಾನೆ! ಒಳಗೆ ದೊಡ್ಡ ಆಫೀಸರ್ ಕುಳಿತಿದ್ದಾರೆ! ನರೇಂದ್ರ ಅಲ್ಲಿದ್ದ ಜನರ ಸಾಲಲ್ಲಿ ತಾನೂ ಸೇರಿ ಅನುಮತಿ ಪತ್ರ ಪಡೆದುಕೊಂಡೇ ಬಿಟ್ಟ!

ಹಿಂದಿರುಗುವಾಗ, ನರೇಂದ್ರ ಠೀವಿಯಿಂದ ಮುಂಬಾಗಿಲಿನಿಂದಲೇ ಬಂದ. ದ್ವಾರಪಾಲಕನ ಮುಂದೆಯೇ ಬಂದುನಿಂತ. ದ್ವಾರಪಾಲಕ ಕಣ್ಣಾಣ್ಣು ಬಿಡುತ್ತ, "ನಿನಗೆ ಹೇಗೆ ಸಿಕ್ಕಿತೋ ಅನುಮತಿ ಪತ್ರ! ನೀನು ಹೇಗೆ ಒಳಗೆ ಹೋದೆಯೋ?" ಎಂದು ಕೇಳಿದ. ಅದಕ್ಕೆ ನರೇಂದ್ರ ಏನು ಹೇಳಿದ ಗೊತ್ತೆ? ಅವನು ತುಂಟನಗೆ ಬೀರುತ್ತ ಹೇಳಿದ,

"ನನಗೆ ಮ್ಯಾಜಿಕ್ ಬರುತ್ತೆ."




(ನೀತಿ: ನಾವು ಕಷ್ಟದ ಸಂದರ್ಭದಲ್ಲಿ ಬುದ್ಧಿಶಕ್ತಿ ಉಪಯೋಗಿಸಬೇಕು. ಬುದ್ಧಿಚಾತುರ್ಯದಿಂದ ಯಶಸ್ಸನ್ನು ಗಳಿಸಬೇಕು.)

*(ಮುಂದಿನ ತಿಂಗಳ ಕತೆ 'ಸಮಯಪ್ರಜ್ಞೆ' ಬಗ್ಗೆ )*

ಪಂಚ ಮಾತೆಯರು:

### ಗೋಮಾತೆ

ಮಕ್ಕಳೇ, ನೀವು ಹಾಲು ಕುಡಿಯುತ್ತೀರಿ. ಹಾಲನ್ನು ಗೋವು ಕೊಡುತ್ತದೆ. ಗೋವು ತನ್ನ ಕರುವಿಗೆ ಹಾಲು ಕೊಡುತ್ತದೆ. ನಿಮಗೂ ಕೊಡುತ್ತದೆ. ಹಾಲು ಕುಡಿಯುವುದರಿಂದ ನಮ್ಮ ದೇಹ ಬೆಳೆಯುತ್ತದೆ. ನಮ್ಮ ಬುದ್ಧಿ ಬೆಳೆಯುತ್ತದೆ. ಆದ್ದರಿಂದ ಹಸುವೂ ಕೂಡ ನಮಗೆ ತಾಯಿಯೇ ಆಗಿದೆ. ಅಲ್ಲವೇ? ಗೋವು ಬಹಳ ಸಾತ್ವಿಕ ಪ್ರಾಣಿ. ಅದು ಒಳ್ಳೆಯದಕ್ಕೂ ಸಹನೆಗೂ ಪವಿತ್ರತೆಗೂ ತ್ಯಾಗಕ್ಕೂ ಸಂಕೇತ. ಆ ಗುಣಗಳು ನಮ್ಮಲ್ಲೂ ಬರಲಿ ಎಂದು ನಾವು ಗೋವನ್ನು ಗೌರವಿಸುತ್ತೇವೆ, ಪೂಜಿಸುತ್ತೇವೆ. ಹಾಗೆಂದೇ ಭಾರತೀಯರಿಗೆ ಗೋವು ಎಂದರೆ ಪ್ರಾಣ. ಕೇವಲ ಹಸುವನ್ನು ಮಾತ್ರ ನಾವು ಗೌರವಿಸಿದರೆ ಸಾಲದು. ಎಲ್ಲ ಪ್ರಾಣಿಗಳಲ್ಲೂ ದಯೆ ತೋರಬೇಕು. ಎಲ್ಲ ಪ್ರಾಣಿಗಳೂ ಭಗವಂತನ ಮಕ್ಕಳೇ ಆಗಿವೆ. ಹೀಗಾಗಿ ಅವುಗಳಲ್ಲಿ ನಮಗೆ ಪ್ರೀತಿ ಇರಬೇಕು. ಪ್ರಾಣಿಗಳನ್ನು ಕ್ರೂರವಾಗಿ ನಡೆಸಿಕೊಳ್ಳಬಾರದು. ಇದು ಗೋವು ನಮಗೆ ಹೇಳಿಕೊಡುವ ಪಾಠ.

(ಮುಂದಿನ ತಿಂಗಳು: ಗಂಗಾಮಾತೆ)

*ಒಳ್ಳೆಯ ಗುಣವನ್ನು ಬೆಳೆಸಿಕೊಳ್ಳುವುದು ಹೇಗೆ ?*

ಒಳ್ಳೆಯ ಆಲೋಚನೆಗಳಿಂದ
*ಒಳ್ಳೆಯ ಕಾರ್ಯಗಳು*
ಒಳ್ಳೆಯ ಕಾರ್ಯಗಳಿಂದ
*ಒಳ್ಳೆಯ ಅಭ್ಯಾಸಗಳು*
ಒಳ್ಳೆಯ ಅಭ್ಯಾಸಗಳಿಂದ
*ಒಳ್ಳೆಯ ಸಂಸ್ಕಾರಗಳು*
ಒಳ್ಳೆಯ ಸಂಸ್ಕಾರಗಳ ಒಟ್ಟು
ಮೊತ್ತವೇ ಒಳ್ಳೆಯ ಚಾರಿತ್ರ್ಯ

–ಸ್ವಾಮಿ ವಿವೇಕಾನಂದ